

# 360 Tips

# ವಾಸ್ತು ಸಲಹೆಗಳು

# ವಾಸ್ತುಶಾಸ್ತ್ರ

- ಈಶಾನ್ಯ ದಿಕ್ಕಿನಲ್ಲಿ ದೇವರ ಕೋಣೆ,  ಪೂರ್ವ ದಿಕ್ಕಿನಲ್ಲಿ ಸ್ನಾನದ ಮನೆ, ಆಗ್ನೇಯ ದಿಕ್ಕಿಗೆ ಅಡುಗೆ ಕೋಣೆ ಮತ್ತು ಉತ್ತರ ದಿಕ್ಕಿಗೆ ಭಂಡಾರವಿರಬೇಕು.
- ಅಡುಗೆ ಮಾಡುವಾಗ ಯಾವಾಗಲೂ ಪೂರ್ವಕ್ಕೆ ಮುಖ ಮಾಡಿಕೊಂಡಿರಬೇಕು.  ಇದರಿಂದ ನಿವಾಸಿಗಳಿಗೆ ಆರೋಗ್ಯ ಭಾಗ್ಯ ಸಿಗುತ್ತದೆ.
- ಆಗ್ನೇಯ ಭಾಗದಲ್ಲಿ ದಿನ ನಿತ್ಯ ದೀಪ ಹಚ್ಚುವುದರಿಂದ ಉತ್ತಮ ಆರೋಗ್ಯ ಲಭ್ಯವಾಗುತ್ತದೆ.
- ಡೈನಿಂಗ್ ರೂಂನ ಪೂರ್ವ ಅಥವಾ ಉತ್ತರ ದಿಕ್ಕಿನಲ್ಲಿ ಕನ್ನಡಿಯನ್ನು ನೇತು ಹಾಕಿ.
- ಕುಡಿಯುವ ನೀರಿನ ಟ್ಯಾಪ್ ಮತ್ತು ನೀರು ಸಂಗ್ರಹಿಸಿಡುವ ಯಾವುದೇ ಸಾಮಗ್ರಿ ಈಶಾನ್ಯ ದಿಕ್ಕಿನಲ್ಲೇ ಇರಬೇಕು.
- ಗ್ಯಾಸ್ ಸಿಲಿಂಡರ್‌ನ್ನು ಅಡುಗೆ ಮನೆಯ ಆಗ್ನೇಯ ಭಾಗದಲ್ಲಿ ಇಡಬೇಕು.
- ಸ್ನಾನ ಗೃಹ ಮತ್ತು ಶೌಚಾಲಯದಿಂದ ಕೆಳಗೆ ಅಥವಾ ಮೇಲ್ಭಾಗದಲ್ಲಿ ಅಡುಗೆ ಮನೆ ಇರಬಾರದು.
- ಪಶ್ಚಿಮ ಮತ್ತು ದಕ್ಷಿಣಕ್ಕೆ ಮುಖ ಮಾಡಿದ ನಿವೇಶನವಾದರೆ ಮನೆ ನಿರ್ಮಿಸುವಾಗ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕು.
- ಮುಖ್ಯ ದ್ವಾರದ ಗೋಡೆಯಲ್ಲಿ ಗಣೇಶನ ಚಿತ್ರ ಅಥವಾ ವಿಗ್ರಹ ಇಡಬೇಕು. ಗೋಡೆ ಖಾಲಿಯಿದ್ದರೆ ಅದು ಏಕಾಂಗಿತನಕ್ಕೆ ಕಾರಣವಾಗುತ್ತದೆ.
- ಮನೆಯ ಪೂರ್ವ ಭಾಗ ಯಾವ ಕಾರಣಕ್ಕೂ ಇತರ ಭಾಗಕ್ಕಿಂತ ಎತ್ತರ ಇರಬಾರದು.
- ಗ್ಯಾಸ್ ಸಿಲಿಂಡರ್‌ನ್ನು ಅಡುಗೆ ಮನೆಯ ಆಗ್ನೇಯ ಭಾಗದಲ್ಲಿ ಇಡಬೇಕು.
- ಅಡುಗೆ ಮನೆ ಬಾಗಿಲು ಮತ್ತು ಶೌಚಾಲಯದ ಬಾಗಿಲು ಎದುರುಬದುರಾಗಿ ಇರಬಾರದು.
- ವಾಸ್ತು ಶಾಸ್ತ್ರದ ಪ್ರಕಾರ ನಿವೇಶನ ಯಾವಾಗಲೂ ಚೌಕ ಅಥವಾ ಆಯತಾಕಾರದಲ್ಲಿಯೇ ಇರಬೇಕು.

- ಆಗ್ನೇಯ ಭಾಗದಲ್ಲಿ ದಿನ ನಿತ್ಯ ದೀಪ ಹಚ್ಚುವುದರಿಂದ ಉತ್ತಮ ಆರೋಗ್ಯ ಲಭ್ಯವಾಗುತ್ತದೆ.
- ಮನೆಯಲ್ಲಿ ಆಂಜನೇಯನ ವಿಗ್ರಹವನ್ನು ದಕ್ಷಿಣದಲ್ಲಿಡಬೇಕು. ಇದರಿಂದ ಆರೋಗ್ಯ ವೃದ್ಧಿಯಾಗುತ್ತದೆ.
- ನೈರುತ್ಯ ಭಾಗದಲ್ಲಿರುವ ಈಜುಕೊಳ ಅಥವಾ ಸಂಪು ಯಾವ ಕಾರಣಕ್ಕೂ ನೆಲದಿಂದ ತಗ್ಗಿನಲ್ಲಿರುವುದು ಬೇಡ.
- ವಸತಿ ಕಟ್ಟಡದ ಪೂರ್ವ ಭಾಗ ಯಾವತ್ತೂ ಉಳಿದ ಭಾಗಕ್ಕಿಂತ ಹೆಚ್ಚು ಎತ್ತರವಾಗಿರಬಾರದು.
- ಲಿವಿಂಗ್ ರೂಂನ ದಕ್ಷಿಣ ಗೋಡೆಯಲ್ಲಿ ಸೂರ್ಯೋದಯದ ಚಿತ್ರ ಪಠವನ್ನು ತೂಗು ಹಾಕಿ.
- ದೇವರ ಪೂಜೆಗೆ ಕುಳಿತುಕೊಳ್ಳುವಾಗ ಈಶಾನ್ಯಕ್ಕೆ ಮುಖ ಮಾಡಬೇಕು.
- ಮುಖ್ಯದ್ವಾರದ ಬಳಿಯಲ್ಲಿ ಕಸದ ತೊಟ್ಟಿಯನ್ನು ಎಂದೂ ಇಡಬೇಡಿ.
- ಬಾಗಿಲು ಸಾಧ್ಯವಾದಷ್ಟೂ ಪೂರ್ವ ದಿಕ್ಕಿನಲ್ಲಿರಬೇಕು. ದಕ್ಷಿಣಕ್ಕೆ ಇರಬಾರದು.
- ನಿಮ್ಮ ಮನೆಯ ಇತರ ಬಾಗಿಲುಗಳು ಮುಖ್ಯ ಬಾಗಿಲಿನ ನೇರಕ್ಕೆ ಇರಬಾರದು, ಇದ್ದರೆ ಅದು ನಿಮ್ಮ ಆರೋಗ್ಯ ಮತ್ತು ಸಂಪತ್ತಿನ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ.
- ಮಳೆ ನೀರು ನಿವೇಶನ ಅಥವಾ ಕಟ್ಟಡದ ಈಶಾನ್ಯ ಮೂಲೆಯಿಂದ ಹರಿಯಬೇಕು ಹಾಗೂ ಉತ್ತರದಿಂದ ಹೊರಗೆ ಹೋಗಬೇಕು.
- ಪೂರ್ವ ಅಥವಾ ಈಶಾನ್ಯ ದಿಕ್ಕಿನಲ್ಲಿ ಪೂಜಾ ಗೃಹ ಇರಬೇಕು. ಬಹು ಮಹಡಿ ಮನೆ ನಿಮ್ಮದಾಗಿದ್ದರೆ ಪೂಜಾ ಗೃಹ ಕೆಳಗಿನ ಮಹಡಿಯಲ್ಲೇ ಇರಬೇಕು.
- ದೇವರ ಕೋಣೆಯಲ್ಲಿ ದೇವರ ಮೂರ್ತಿಯನ್ನಿಡುವಾಗ ಎರಡು ಫೋಟೋಗಳ ನಡುವೆ ಅಂತರ ಇರುವಂತೆ ನೋಡಿಕೊಳ್ಳಿ. ಜೊತೆಗೆ ರೂಮ್ ಸ್ವಚ್ಛವಾ.
- ಲಕ್ಷ್ಮೀ ದೇವಿಯ ಮೂರ್ತಿ ಕಮಲದ ಹೂವಿನ ಮೇಲೆ ವಿರಾಜಮಾನವಾಗಿದ್ದರೆ ಉತ್ತಮ.
- ಒಡೆದ ಕನ್ನಡಿಯನ್ನು ಮನೆಯಲ್ಲಿಟ್ಟುಕೊಳ್ಳುವುದರಿಂದ ಮನೆಯ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಮೂಡುವುದು, ಜಗಳ, ಮನಸ್ತಾಪಗಳಾಗುವ ಸಾಧ್ಯತೆ ಇರುತ್ತದೆ.

- ಬೆಡ್‌ರೂಮ್, ದೇವರಕೋಣೆ ಅಥವಾ ಅಡುಗೆಮನೆಯೊಂದಿಗೆ ಟಾಯ್ಲೆಟ್ ಒಂದೇ ಗೋಡೆ ಹಂಚಿಕೊಂಡಿರಬಾರದು. ಇದ್ರಿಂದ ಮನೆಯಲ್ಲಿ ನಕಾರಾತ್ಮಕ ಭಾವನೆಗಳು ಹೆಚ್ಚುತ್ತವೆ. ಬೆಡ್‌ರೂಮ್ ಮತ್ತು ಟಾಯ್ಲೆಟ್ ಒಂದೇ ಗೋಡೆಯನ್ನು ಹಂಚಿಕೊಂಡಿದ್ರೆ ಮನೆ ಸದಸ್ಯರಿಗೆ ಕೆಟ್ಟ ಕನಸುಗಳು ಕಾಡುವ ಸಾಧ್ಯತೆ ಹೆಚ್ಚಿದೆ.

- ಮನೆಯಲ್ಲಿ ಬಾತ್‌ರೂಮ್ ಅನ್ನು ವಾಯುವ್ಯ ದಿಕ್ಕಿನಲ್ಲಿ ನಿರ್ಮಿಸೋದು ಉತ್ತಮ. ವಾಸ್ತು ಪ್ರಕಾರ ಇದು ತ್ಯಾಜ್ಯವನ್ನು ಹೊರಹಾಕಲು ಸೂಕ್ತವಾದ ದಿಕ್ಕು.

- ಗಡಿಯಾರ ಯಾವಾಗಲೂ ಪೂರ್ವ ದಿಕ್ಕಿಗೆ ಮುಖ ಮಾಡಿರುವಂತೆ ತೂಗು ಹಾಕೋದು ಶುಭ ಸೂಚಕ.

- ಮನೆಯಲ್ಲಿರುವ ಎಲ್ಲ ಗಡಿಯಾರಗಳು ಸರಿಯಾದ ಸಮಯವನ್ನೇ ತೋರಿಸಬೇಕು. ಒಂದೊಂದು ಗಡಿಯಾರ ಒಂದೊಂದು ಸಮಯವನ್ನು ತೋರಿಸೋದು ಶುಭ ಸೂಚಕವಲ್ಲ. ಆದಕಾರಣ ಮನೆಯಲ್ಲಿರುವ ಎಲ್ಲ ಗಡಿಯಾರಗಳೂ ಸರಿಯಾದ ಹಾಗೂ ಒಂದೇ ಸಮಯವನ್ನು ಸೂಚಿಸುವಂತೆ ನೋಡಿಕೊಳ್ಳಿ.

- ಬಾಗಿಲುಗಳು ಸಮಸಂಖ್ಯೆಯಲ್ಲಿರ ಬೇಕು.

- ನಾಲ್ಕು ದಿಕ್ಕಿನಲ್ಲೂ ರಸ್ತೆಗಳಿರುವ ನಿವೇಶನ ಅತ್ಯುತ್ತಮ ಆಯ್ಕೆ ಎಂದು ವಾಸ್ತು ಶಾಸ್ತ್ರ ತಿಳಿಸುತ್ತದೆ.

- ಬ್ರಹ್ಮಸ್ಥಾನ ಎಂದು ಪರಿಗಣಿಸಲ್ಪಟ್ಟಿರುವ ಮನೆಯ ಕೇಂದ್ರ ಭಾಗದಲ್ಲಿ ಭಾರವಾದ ಪೀಠೋಪಕರಣ ಹಾಕಬೇಡಿ.

- ಅಗ್ನಿ ಧಾತುವಿನ ಅಸಮತೋಲನವೇ ಸದಸ್ಯರ ಆರೋಗ್ಯವನ್ನು ಏರುಪೇರು ಮಾಡುವ ಪ್ರಮುಖ ಮೂಲ.

- ನಲ್ಲಿಯಲ್ಲಿ ನೀರು ಸೋರಬಾರದು. ಅದು ಹಣ ವ್ಯರ್ಥವಾಗಲು ದಾರಿ ಮಾಡಿಕೊಡುತ್ತದೆ.

- ಆಗ್ನೇಯ ದಿಕ್ಕಿನಲ್ಲಿ ಬಾಲ್ಕನಿ ಇರುವುದು ಯಾವ ಕಾರಣಕ್ಕೂ ಶ್ರೇಯಸ್ಕರವಲ್ಲ.

- ನೈರುತ್ಯ ಭಾಗದಲ್ಲಿರುವ ಈಜುಕೊಳ ಅಥವಾ ಸಂಪು ಯಾವ ಕಾರಣಕ್ಕೂ ನೆಲದಿಂದ ತಗ್ಗಿನಲ್ಲಿರುವುದು ಬೇಡ.

- ಈಶಾನ್ಯ ಭಾಗದ ಮೇಲ್ಛಾವಣಿ ಆಗ್ನೇಯ ಮತ್ತು ನೈರುತ್ಯ ಭಾಗಕ್ಕೆ ಹೋಲಿಸಿದರೆ ಸ್ವಲ್ಪ ಇಳಿಜಾರು ಆಗಿರಬೇಕು.

- ನಿವೇಶನದನ್ಯೆರುತ್ಯ ಭಾಗದಲ್ಲಿ ಮನೆಯನ್ನು ನಿರ್ಮಾಣ ಮಾಡುವುದು ಹೆಚ್ಚು ಸೂಕ್ತ.

- ಉತ್ತರ ಮತ್ತು ಪೂರ್ವ ಭಾಗದಲ್ಲಿ ಬಾಲ್ಕನಿ ಇರುವುದು ಅತಿ ಹೆಚ್ಚು ಶ್ರೇಯಸ್ಕರ ಎಂದು ನಂಬಲಾಗಿದೆ.

- ಯಾವಾಗಲೂ ರಾತ್ರಿ ನಿದ್ರಿಸುವಾಗ ದಕ್ಷಿಣ ದಿಕ್ಕಿನ ಕಡೆಗೇ ತಲೆ ಹಾಕಿ ಮಲಗಿ.

- ಪೂರ್ವ ಮತ್ತು ಉತ್ತರ ದಿಕ್ಕಿಗೆ ನಿಂತುಕೊಂಡು ಅಡುಗೆ ಮಾಡಬೇಕು.

- ದಕ್ಷಿಣ ದಿಕ್ಕಿಗೆ ಮುಖವಾಗಿ ಪಾತ್ರೆ ತೊಳೆಯಬೇಕು.

- ಮಕ್ಕಳು ಮಲಗುವ ಕೋಣೆ ಉತ್ತರ ಪೂರ್ವಕ್ಕೆ ಇರಬೇಕು.

- ಮಲಗುವ ಕೋಣೆಯಲ್ಲಿ ಕನ್ನಡಿ ಇರಬಾರದು ಯಾಕೆಂದರೆ ಬೆಳಗ್ಗೆ ನಿದ್ರೆಯಿಂದ ಎದ್ದ ನಂತರ ನಮ್ಮ ಮುಖವನ್ನು ನಾವೇ ನೋಡಿಕೊಳ್ಳಬಾರದು ಹಾಗೇನಾದರೂ ಕನ್ನಡಿ ಇದ್ದರೆ ಅದನ್ನು ಬಟ್ಟೆಯಿಂದ ಮುಚ್ಚಿ ಬಿಡಿ.

- ಪೂಜಾ ಗೃಹದಲ್ಲಿ ಯಾವತ್ತೂ ಕಪ್ಪು ಅಥವಾ ಹಸಿರು ಬಣ್ಣದ ಪೈಂಟ್ ಹಾಕಬೇಡಿ. ಬದಲಾಗಿ ಕಲರ್ ಮಾರ್ಬಲ್ ಬಳಸಿ.

- ಊಟದ ಕೋಣೆಯಲ್ಲಿ ಕನ್ನಡಿ ಇದ್ದರೆ ಒಳ್ಳೆಯದು ಆರೋಗ್ಯ ವೃದ್ದಿಸುತ್ತದೆ.

- ಊಟ ಮಾಡುವಾಗ ಪೂರ್ವದಿಕ್ಕಿಗೆ ಕುಳಿತು ಊಟ ಮಾಡಬೇಕು ಅಂದರೆ ಸೂರ್ಯ ಉದಯಿಸುವ ದಿಕ್ಕು.

- ಅನ್ನ ಮಾಡಿದ ಪಾತ್ರೆ ಮತ್ತು ಅಡುಗೆಯನ್ನು ಮಾಡಲು ಬಳಸಿದ ಪಾತ್ರೆಗಳನ್ನು ತೊಳೆದ ನಂತರ ಮಗುಚಿ ಇಡಬಾರದು ಅದೇ ರೀತಿ ಊಟ ಮಾಡಲು ಬಳಸುವ ತಟ್ಟೆ ಲೋಟಗಳನ್ನು ಮಗುಚಿ ಇಡಬಾರದು ಹೀಗೆ ಮಾಡಿದರೆ ಮನೆಗೆ ದರಿದ್ರ ಆವರಿಸುತ್ತದೆ ಅನ್ನಕ್ಕೆ ಕೊರತೆ ಉಂಟಾಗುತ್ತದೆ.

- ಬಾಗಿಲಿನ ಮೇಲೆ ಓಂ, ಶ್ರೀ, ಸ್ವಸ್ತಿಕ ಹಾಗೆಯೇ ಮಂಗಳ ಕಲಶ ಇತ್ಯಾದಿ ಶುಭಚಿಹ್ನೆಗಳನ್ನು ಬಿಡಿಸಬೇಕು. ಅರಶಿನ ಕುಂಕುಮ, ಆಕಳಿನ ಸಗಣಿ ಮತ್ತು ಗೋಮೂತ್ರವನ್ನು ಮಿಶ್ರಿತ ಮಾಡಿ ಈ ಚಿಹ್ನೆಗಳನ್ನು ಬಿಡಿಸಬೇಕು. ಹೀಗೆ ಮಾಡುವುದರಿಂದ ದುಷ್ಟ ಶಕ್ತಿಗಳು ಬಾಗಿಲಿನಿಂದ ಒಳಗೆ ಪ್ರವೇಶಿಸುವುದಿಲ್ಲ.

- ಓಡುತ್ತಿರುವ ಕುದುರೆಯ ಚಿತ್ರವನ್ನು ದಕ್ಷಿಣದಲ್ಲಿ ಹಾಕಿದರೆ ಹಣದ ಹರಿವು ಸ್ಥಿರವಾಗಿರುತ್ತದೆ ಮತ್ತು ಮನೆಯಲ್ಲಿ ಸಾಮರಸ್ಯವಿರುತ್ತದೆ.

- ಉತ್ತಮ ದೃಷ್ಟಿಕೋನ ಮತ್ತು ಯೋಜನೆ ರೂಪಿಸಲು ನೆರವಾಗುವಂತೆ ಈಶಾನ್ಯ ದಿಕ್ಕಿನಲ್ಲಿ ಹಸಿರು ತುಂಬಿದ ಚಿತ್ರವಿರಬೇಕು.

- ಮನೆಯಲ್ಲಿರುವ ಸಮಸ್ತ ವಾಸ್ತು ದೋಷ ನಿವಾರಣೆಗೆ ಪಿರಾಮಿಡ್‌ಗಳನ್ನು ಇಡುವುದು ಅತ್ಯಂತ ಪರಿಣಾಮಕಾರಿ.
- ಈಶಾನ್ಯ ದಿಕ್ಕಿನಲ್ಲಿ ಚಿಕ್ಕ ನೀರಿನ ಕಾರಂಜಿ ಇಟ್ಟರೆ ಮನೆಯಲ್ಲಿ ಸಾಮರಸ್ಯ ಒಡಮೂಡುತ್ತದೆ.
- ರೇಖಿ ಶಕ್ತಿ ತುಂಬಿರುವ ಹರಳನ್ನು ಬ್ರಹ್ಮ ಸ್ಥಾನದಲ್ಲಿಡುವುದರಿಂದ ಮನೆಗೆ ಎನರ್ಜಿ ತುಂಬಬಹುದು.
- ಮನೆಯು ದಕ್ಷಿಣಕ್ಕೆ ಮುಖ ಮಾಡಿದ್ದರೆ ದಕ್ಷಿಣದ ಗೋಡೆ ಮತ್ತು ಗೇಟು ಯಾವಾಗಲೂ ಮುಚ್ಚಿರಲಿ.
- ನಾಲ್ಕು ದಿಕ್ಕಿನಲ್ಲೂ ರಸ್ತೆಗಳಿರುವ ನಿವೇಶನ ಅತ್ಯುತ್ತಮ ಆಯ್ಕೆ ಎಂದು ವಾಸ್ತು ಶಾಸ್ತ್ರ ತಿಳಿಸುತ್ತದೆ.
- ಆಗ್ನೇಯ ದಿಕ್ಕಿನಲ್ಲಿ ಶುಕ್ರ ದೇವನ ಅದಿಪತ್ಯವಿದೆ. ಶುಕ್ರ ಗ್ರಹದ ಜಾಗದಲ್ಲಿ ಮನಿ ಪ್ಲಾಂಟ್ ಗಿಡ ನೆಟ್ಟರೆ ಶುಭ.
- ಡ್ರ್ಯಾಗನ್ ಮೇಲೆ ಕೂತಿರುವ ಕುಬೇರನನ್ನು ಉತ್ತರ ದಿಕ್ಕಿಗೆ ಮುಖ ಮಾಡಿ ಇರಿಸಬೇಕು. ಇದು ಔದ್ಯೋಗಿಕ ಜೀವನವನ್ನು ಉತ್ತಮಗೊಳಿಸುತ್ತದೆ.
- ಅಕ್ವೇರಿಯಂನಲ್ಲಿ 1-3-5-7-9 ಸಂಖ್ಯೆಯಲ್ಲಿ ಮೀನುಗಳನ್ನಿಡಬೇಕು.
- ಮನೆಯ ಉತ್ತರ ಅಥವಾ ಪೂರ್ವಾಭಿಮುಖವಾಗಿ ಅಕ್ವೇರಿಯಂ ಇಡಬೇಕು.
- ಮನೆಯ ಅಂಗಳದಲ್ಲಿ ಮುಖ್ಯ ಬಾಗಿಲಿನ ಎದುರು ತುಳಸಿ ಗಿಡವಿದ್ದರೆ, ಮನೆಗೆ ನಕಾರಾತ್ಮಕ ಶಕ್ತಿ ಪ್ರವೇಶ ಆಗೋದಿಲ್ಲ.
- ಮನಿ ಪ್ಲಾಂಟ್ ಎಷ್ಟು ಹಸಿರಾಗಿರುತ್ತದೋ, ಅಷ್ಟು ಶುಭ ಎನ್ನುತ್ತಾರೆ. ಇದರ ಎಲೆಗಳು ಒಣಗಿ ಹೋಗುವುದು, ಹಳದಿ, ಬಿಳಿಯಾಗುವುದು ಅಶುಭ. ಆದುದರಿಂದ ಎಲೆ ಹಾಳಾದ ಕೂಡಲೇ ಅದನ್ನು ಕಿತ್ತುಬಿಡಿ.
- ಮನಿ ಪ್ಲಾಂಟ್ ಸಮೃದ್ಧಿಯ ಸಂಕೇತ. ಆದುದರಿಂದ ಇದನ್ನು ಮೇಲಕ್ಕೆ ಏರುವಂತೆ ಬೆಳೆಸಲಾಗುತ್ತದೆ. ನೆಲದ ಮೇಲೆ ಬೆಳೆದ ಮನಿ ಪ್ಲಾಂಟ್ ವಾಸ್ತು ದೋಷ ಹೆಚ್ಚಿಸುತ್ತದೆ.
- ಸ್ಫಟಿಕ ಕುಬೇರನ ಕೈಯಲ್ಲಿ ಮುತ್ತಿದ್ದು, ಅದನ್ನು ಮನೆ ಅಥವಾ ಕೋಣೆ ಮದ್ಯೆ ಇಟ್ಟರೆ ಕುಟುಂಬದ ಎಲ್ಲರ ಜ್ಞಾನ ಹೆಚ್ಚುತ್ತದೆ.
- ಅಕ್ವೇರಿಯಂನಲ್ಲಿ ಒಂಬತ್ತು ಮೀನುಗಳಿದ್ದು, ಅವುಗಳಲ್ಲಿ ಎಂಟು ಒಂದೇ ತಳಿಗೆ ಸೇರಿದ್ದಾದರೆ ಶುಭ.
- ಮಲಗುವ ಕೋಣೆಯಲ್ಲಿ ಬೀರುವನ್ನು ನೈಋತ್ಯ ಮೂಲೆಯಲ್ಲಿ ಇಟ್ಟರೆ ಒಳ್ಳೆಯದು.

- ಹೂವಿನ ಗಿಡ ಮತ್ತು ಅಕ್ವೇರಿಯಂ ಗಳನ್ನು ಮಲಗುವ ಕೋಣೆಯಲ್ಲಿ ಇರಿಸಬಾರದು.
- ಪೂಜಾ ಕೋಣೆಯಲ್ಲಿ ಇಡುವ ವಿಗ್ರಹದ ಎತ್ತರವು 3 ಅಡಿಕ್ಕಿಂತ ಹೆಚ್ಚಿರಬಾರದು ಮತ್ತು 2 ಕ್ಕಿಂತ ಕಡಿಮೆಯಿರಬಾರದು.
- ಪೂಜಾ ಕೋಣೆಯ ಬಾಗಿಲು ಮತ್ತು ಕಿಟಕಿಗಳು ಉತ್ತರ ಅಥವಾ ಪೂರ್ವದಲ್ಲಿರುವಂತೆ ಗಮನವಿಡಿ.
- ದೇವರ ಪೂಜೆಗೆ ತಾಮ್ರದ ಪಾತ್ರೆಗಳನ್ನು ಬಳಸಿ. ತಾಮ್ರದ ಪಾತ್ರೆ ದೇವರ ಕೆಲಸಗಳಿಗೆ ಪವಿತ್ರ.
- ರಾತ್ರಿ ವೇಳೆ ಪೊರಕೆಯನ್ನು ಮನೆಯ ಹೊರಗೆ ಅಥವಾ ಮುಖ್ಯದ್ವಾರದ ಬಳಿಯಿಡುವುದು ಶುಭಕಾರಕ ಎಂಬ ನಂಬಿಕೆಯಿದೆ. ಹೀಗೆ ಮಾಡುವುದರಿಂದ ನಕಾರಾತ್ಮಕ ಶಕ್ತಿಗಳು ಮನೆಯೊಳಗೆ ಪ್ರವೇಶಿಸುವುದಿಲ್ಲವಂತೆ.
- ವಾಸ್ತುಶಾಸ್ತ್ರದ ಪ್ರಕಾರ ಹಗಲು ಹೊತ್ತಿನಲ್ಲಿ ಪೊರಕೆಯನ್ನು ಮನೆಯಲ್ಲಿ ಯಾರ ಕಣ್ಣಿಗೂ ಬೀಳದ ಸ್ಥಳದಲ್ಲಿಡಬೇಕಂತೆ. ಅಂದರೆ ಯಾವುದಾದರೊಂದು ಮೂಲೆ ಅಥವಾ ಬಾಗಿಲಿನ ಸಂಧಿಯಂತಹ ಜಾಗ.
- ಶುಕ್ಲಪಕ್ಷದಲ್ಲಿ ಪೊರಕೆ ಕೊಳ್ಳುವುದು ಶುಭಕಾರಕವಲ್ಲ. ಈ ಸಮಯದಲ್ಲಿ ಪೊರಕೆ ಕೊಳ್ಳುವುದರಿಂದ ನಕಾರಾತ್ಮಕ ಶಕ್ತಿಗಳು ಶಕ್ತಿಗಳು ಮನೆ ಪ್ರವೇಶಿಸುತ್ತವೆ.
- ಕೃಷ್ಣಪಕ್ಷ ಪೊರಕೆ ಕೊಳ್ಳಲು ಅತ್ಯಂತ ಶುಭವಾದ ದಿನ. ಈ ದಿನ ಪೊರಕೆ ಕೊಳ್ಳುವುದರಿಂದ ಲಕ್ಷ್ಮೀ ದೇವತೆ ನಿಮ್ಮ ಮನೆಗೆ ಆಗಮಿಸುತ್ತಾಳಂತೆ.
- ಒಳ್ಳೆ ಗುಣಮಟ್ಟದ ಮರದ ಬಾಗಿಲು ಮನೆಗೆ ಮಂಗಳಕರ. ಬಾಗಿಲು ಮಣ್ಣು ಬಣ್ಣ, ತಿಳಿ ಹಳದಿ ಬಣ್ಣದಲ್ಲಿದರೆ ಒಳಿತು. ಮುಂಬಾಗಿಲಿಗೆ ಕಪ್ಪು ಬಣ್ಣ ಬಳಿಯದಿರಿ.
- ಮುಖ್ಯದ್ವಾರ ಬಳಿ ಬೆಳಕಿರಲಿ. ಬಾಗಲಿಗೆ ಸುಂದರವಾದ ನಾಮಫಲಕ ಇರುವಂತೆ ಗಮನ ಹರಿಸಿ. ಇದು ಸಮೃದ್ಧಿ, ಸುಖ ಮತ್ತು ಸಂತೋಷವನ್ನು ತರುತ್ತದೆ.
- ಮನೆಯ ಪ್ರವೇಶದ ಬಳಿ ಹಸಿರು ಗಿಡಗಳನ್ನು ಇಟ್ಟು ಅಲಂಕರಿಸಿದರೆ ನಿಮ್ಮ ಮನೆಯಲ್ಲಿ ಸದಾ ಪಾಸಿಟವ್ ಎನರ್ಜಿ ನೆಲೆಸುವುದು ಖಂಡಿತ.
- ವಾಸ್ತು ಶಾಸ್ತ್ರದ ಪ್ರಕಾರ ಮನೆಯಲ್ಲಿ ಈಶಾನ್ಯ ದಿಕ್ಕಿನಲ್ಲಿ ಚಪ್ಪಲಿ. ಸ್ಟ್ಯಾಂಡ್ ಇಡಬಾರದು. ಈ ದಿಕ್ಕಿನಲ್ಲಿ ಸೂರ್ಯನ ಮೊದಲ ಕಿರಣಗಳು ಬೀಳಲಿದ್ದು, ಮನೆಗೆ ಧನಾತ್ಮಕ ಶಕ್ತಿ ಪ್ರವೇಶವಾಗುವ ಸ್ಥಳದಲ್ಲಿ ಚಪ್ಪಲಿಯಿರಬಾರದು.

- ಅಮೂಲ್ಯವಾದ ವಸ್ತುಗಳನ್ನು ಅಂದರೆ ಹಣ, ಚಿನ್ನ ಮೊದಲಾದ ವಸ್ತುಗಳನ್ನು ನೈಋತ್ಯ ದಿಕ್ಕಿನಲ್ಲಿ ಇಡಿ. ಬಾಗಿಲು ಉತ್ತರ ದಿಕ್ಕಿಗೆ ತೆರೆದುಕೊಳ್ಳುವಂತಿರಬೇಕು.

- ಮನೆಯ ಮುಂಬಾಗಿಲಿನ ಬಳಿ ಚಿನ್ನದ ನಾಣ್ಯಗಳನ್ನು ಹೊತ್ತ ಲಾಫಿಂಗ್ ಬುದ್ಧನ ಮೂರ್ತಿಯನ್ನು ಇರಿಸಿ. ಹೀಗೆ ಮಾಡಿದರೆ ನಿಮ್ಮ ಮನೆಯಲ್ಲಿ ಭಾಗ್ಯ ನೆಲೆಸುವುದು.

- ಮನೆಯ ವಾಯುವ್ಯ ದಿಕ್ಕಿನಲ್ಲಿ ಮೆಟಲ್ ವಸ್ತು ಅಥವಾ ಕ್ರಿಸ್ಟಲ್ ಬಾಲ್ ಇಡಬೇಕು. ಇದರಿಂದ ದುಷ್ಟ ಶಕ್ತಿ ಮನೆ ಪ್ರವೇಶ ಮಾಡುವುದಿಲ್ಲ.

- ವಾಸ್ತುವಿನ ಅನುಸಾರ ಮನೆಯಲ್ಲಿ ಮುಳ್ಳಿನ ಗಿಡಗಳು ಇರಬಾರದು. ಇದಲ್ಲದೆ ಯಾವ ಗಿಡದಲ್ಲಿ ಎಲೆಗಳಿಂದ ಹಾಲು ಬರುತ್ತದೋ, ಅಂಥ ಗಿಡವನ್ನು ನೆಡಬೇಡಿ. ಇದರಿಂದ ನಕಾರಾತ್ಮಕ ಶಕ್ತಿ ತುಂಬುತ್ತದೆ. ಜೊತೆಗೆ ಮನೆಯಲ್ಲಿ ಅನಾರೋಗ್ಯ ಸಮಸ್ಯೆ ಉಂಟಾಗುತ್ತದೆ.

- ಪೂಜಾ ಸ್ಥಳದಲ್ಲಿ ಒಂದೇ ದೇವರ ಎರಡು ಮೂರ್ತಿಗಳನ್ನು ಇಡಬಾರದು. ಒಂದೇ ಮೂರ್ತಿಗಳು ಜೊತೆಯಾಗಿ ಅಥವಾ ಎದುರು ಬದುರು ಇರಬಾರದು. ಇಂತಹ ಮೂರ್ತಿಗಳ ದರ್ಶಿಸುವುದರಿಂದ ಜಗಳ ಹೆಚ್ಚುತ್ತದೆ.

- ಯುದ್ಧ ಮಾಡುತ್ತಿರುವ ದೇವರ ಫೋಟೋ ಅಥವಾ ಸಂಹಾರ ಮಾಡುತ್ತಿರುವ ಫೋಟೋವನ್ನು ಪೂಜಿಸಬೇಡಿ. ಇದರಿಂದ ದುಃಖ ಹೆಚ್ಚುತ್ತದೆ.

- ಸ್ವಸ್ತಿಕ ಸಂಪತ್ತು ಮತ್ತು ಸಮೃದ್ಧಿಯ ಸಂಕೇತ. ಈ ಚಿಹ್ನೆಯ ಎಡ ಬದಿ ಗಣೇಶ ಇರುವನೆಂದು ಸೂಚಿಸುತ್ತದೆ. ಸ್ವಸ್ತಿಕ ಮನೆಯಲ್ಲಿದ್ದರೆ ಸಂಪತ್ತು ಮತ್ತು ಸಮೃದ್ಧಿ ಮನೆಯಲ್ಲಿ ಸದಾ ತುಂಬಿರುತ್ತದೆ ಎಂದರ್ಥ.

- ಬೆಡ್ ರೂಮ್' ನಲ್ಲಿ ತಾಜ್ ಮಹಲ್ ಫೋಟೋ ಮೂರ್ತಿ ಇಡಬೇಡಿ. ಇದರಿಂದ ನೆಗೆಟಿವ್ ಎನರ್ಜಿ ಬೀರುತ್ತದೆ.

- ಬೆಡ್ ರೂಮ್ ನಲ್ಲಿ ಕಾಡು ಪ್ರಾಣಿ ಮುಖ್ಯವಾಗಿ ಸಿಂಹ ಹುಲಿಯ ವ್ಯಾಘ್ರವಾದ ಫೋಟೋ ಇಡಬೇಡಿ. ಇದರಿಂದ ಇಬ್ಬರ ನಡುವೆ ಕಲಹ ಹೆಚ್ಚುತ್ತದೆ.

- ದೊಡ್ಡದಾದ ಮನೆ ಅಥವಾ ಕಚೇರಿಯಲ್ಲಿ ದೇವರ ಕೋಣೆ ನಿರ್ಮಿಸುವಾಗ ಅದು ಮಧ್ಯದಲ್ಲಿರಲಿ. ಇದರಿಂದ ಪೂರ್ತಿ ಮನೆಗೆ ಪಾಸಿಟಿವ್ ಎನರ್ಜಿ ಹರಡುತ್ತದೆ.

- ಸುಗಂಧಿತ ಅಗರಬತ್ತಿಗಳನ್ನು ಹಚ್ಚಿಡುವುದರಿಂದ ಮನೆ ವಾತಾವರಣ ಆಹ್ಲಾದಕರವಾಗಿರುತ್ತದೆ. ಜೊತೆಗೆ ಸಕಾರಾತ್ಮಕ ಶಕ್ತಿ ಹೆಚ್ಚುತ್ತದೆ.

- ವಾಸ್ತು ಶಾಸ್ತ್ರದ ಪ್ರಕಾರ ನೀರಿಗೆ ಚಿಟಕಿ ಉಪ್ಪು ಸೇರಿಸಿ ಕೈ, ಕಾಲು ತೊಳೆದು ಮಲಗುವುದರಿಂದ ಚೆನ್ನಾಗಿ ನಿದ್ರೆ ಬರುತ್ತದೆ.

- ಮಲಗುವ ಮುನ್ನ ಬೆಡ್ ರೂಮಿನಲ್ಲಿ ಎಳ್ಳೆಣ್ಣೆ ದೀಪ ಹಚ್ಚಿದರೆ ಒಳಿತು.

- ದೇವರ ಮನೆಯಲ್ಲಿ ಭಗ್ನಗೊಂಡ, ಮುಕ್ಕಾದ, ಸವೆದು ಹೋದ ವಿಗ್ರಹಗಳನ್ನು ಇಡಬಾರದು.

- ವಿಗ್ರಹವನ್ನು ಗೋಡೆಗೆ ತಾಗಿಸಿ ಇಡಬಾರದು.

- ಪಶ್ಚಿಮ ದಿಕ್ಕಿಗೆ ತಲೆ ಹಾಕಿ ಮಲಗಬಾರದು. ಇದು ದುಃಖ, ಅನಾರೋಗ್ಯ ಮತ್ತು ಅಸಂತೋಷವನ್ನು ಉಂಟು ಮಾಡುತ್ತದೆ.

- ತುಳಸಿಯಂತಹ ಆರೋಗ್ಯ ಮತ್ತು ಅಧ್ಯಾತ್ಮ ಶಕ್ತಿ ಹೊಂದಿರುವ ಗಿಡಗಳನ್ನು ಬೆಳೆಸಿ. ಕನಿಷ್ಠ ಒಂದು ತುಳಸಿ ಗಿಡವಾದರೂ ಈಶಾನ್ಯ ಭಾಗದಲ್ಲಿರಲಿ.

- ಪಶ್ಚಿಮದತ್ತ ಮುಖ ಮಾಡಿ ಅಭ್ಯಾಸ ಮಾಡಿದರೆ ಮಕ್ಕಳು ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡುತ್ತಾರೆ.

- ಸ್ಟಡಿ ರೂಮ್ ಬಣ್ಣ ಪಿಂಕ್ ಇದ್ದರೆ ಉತ್ತಮ. ವಾಸ್ತು ಶಾಸ್ತ್ರದ ಪ್ರಕಾರ ನಸು ಬಣ್ಣ ವಿದ್ಯಾರ್ಥಿಗಳ ಗ್ರಹಣ ಶಕ್ತಿಯನ್ನು ಹೆಚ್ಚಿಸುತ್ತದೆ.

- ಆಮೆ ಹಾಗೂ ಗರುಡವನ್ನು ಬೆಳ್ಳಿಯಿಂದ ಮಾಡಿಸಿ ಮನೆಯ ಪೂಜೆ ಪೂಜಾ ಸ್ಥಳದಲ್ಲಿ ಇಟ್ಟರೆ ಒಳ್ಳೆಯದು ಲಕ್ಷ್ಮಿಯ ಅನುಗ್ರಹದಿಂದ ಧನ ಪ್ರಾಪ್ತಿಯಾಗುತ್ತದೆ.

- ಹಸುವಿನ ಚಿತ್ರಪಟ ಅಥವಾ ಗೋಮಾತೆಯನ್ನು ಬೆಳ್ಳಿಯಿಂದ ಮಾಡಿಸಿ ಪೂಜಾ ಸ್ಥಳದಲ್ಲಿ ಸ್ಥಾಪನೆ ಮಾಡಿ ಪೂಜಿಸಿದರೆ ಒಳ್ಳೆಯದು ಯಾಕೆಂದರೆ ಗೋವಿನಲ್ಲಿ ಎಲ್ಲಾ ದೇವರುಗಳು ನೆಲೆಸಿದ್ದಾರೆ ಗೋಮಾತೆ ನಮ್ಮ ಮನೆಯಲ್ಲಿ ಇರುವ ಎಲ್ಲಾ ಕಷ್ಟಗಳನ್ನು ನಾಶಮಾಡಿ ಸುಖ ಶಾಂತಿ ನೆಮ್ಮದಿಯನ್ನು ಮನೆಯಲ್ಲಿ ನೆಲೆಸುವಂತೆ ಮಾಡುತ್ತದೆ.

- ತಿಂಗಳ ಮೊದಲ ಸೋಮವಾರ ಬಿಳಿ ಬಟ್ಟೆಯಲ್ಲಿ ಅಕ್ಕಿಯನ್ನು ಕಟ್ಟಿ ಕಾಳಿ ದೇವಿಗೆ ಅರ್ಪಿಸಿ. ಇದರಿಂದ ನೌಕರಿ ಸಮಸ್ಯೆ ನಿವಾರಣೆಯಾಗುತ್ತದೆ.

- ಇಷ್ಟ ಪಟ್ಟ ಕೆಲಸ ಸಿಗಲು ಅಥವಾ ಪ್ರಮೋಷನ್ ಸಿಗಲು ಶನಿವಾರ ಶನಿ ದೇವನ ದರ್ಶನ ಮಾಡಿ. ಮತ್ತು ಓಂ ಶನೈಶ್ಚರಾಯ ನಮಃ ಎಂದು 108 ಬಾರಿ ಪಠಿಸಿ.

- ಡೈನಿಂಗ್ ರೂಮಿನಲ್ಲಿ ಊಟ ಮಾಡುವ ಸಮಯದಲ್ಲಿ ಪೂರ್ವ ಅಥವಾ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಊಟ ಮಾಡಿ.

- ಯಾವಾಗಲೂ ಪೂರ್ವ ಅಥವಾ ದಕ್ಷಿಣ ದಿಕ್ಕಿಗೆ ತಲೆ ಹಾಕಿ ಮಲಗಿ.

- ಮನೆಯ ಈಶಾನ್ಯ ದಿಕ್ಕಿನಲ್ಲಿ ಯಾವತ್ತೂ ಕಸ ಹಾಕಬೇಡಿ. ಆ ಜಾಗವನ್ನು ಸುಂದರವಾಗಿಡಿ.

- ಮನೆಯ ಅಡುಗೆ ಕೋಣೆಯ ಮುಖ್ಯ ಭಾಗ ಆಗ್ನೇಯ ದಿಕ್ಕು. ಇದನ್ನ ಅಗ್ನಿ ಮೂಲೆ ಎಂದು ಕರೆಯುತ್ತಾರೆ. ಇದು ಮನೆಯ ಒಂದು ಮುಖ್ಯವಾದ ಭಾಗವಾಗಿದೆ.

- ಪೂಜೆಗಾಗಿ ಮನೆಯ ಈಶಾನ್ಯ ದಿಕ್ಕು ಅತ್ಯುತ್ತಮ. ಮೂರ್ತಿಯ ಮುಖ ಪೂರ್ವ ಅಥವಾ ಪಶ್ಚಿಮ ದಿಕ್ಕಿನಲ್ಲಿರಲಿ.

- ಮನೆಯ ಮುಖ್ಯ ದ್ವಾರದಲ್ಲಿ ಧನ ದೇವತೆ ಲಕ್ಷ್ಮಿ, ಕುಬೇರನ ಫೋಟೋ ಅಥವಾ ಸ್ವಸ್ತಿಕ ಚಿಹ್ನೆ ಹಾಕಿ. ಇದರಿಂದ ಹಣ ಯಾವತ್ತೂ ಕರಗೋಲ್ಲ.

- ಮನೆಯಲ್ಲಿ ವಾಸ್ತು ದೇವತೆ ಫೋಟೋ ಇಡೋದರಿಂದ ಮನೆಯ ಎಲ್ಲ ವಾಸ್ತು ದೋಷವೂ ನಿವಾರಣೆಯಾಗಿ, ಆರ್ಥಿಕ ಅಭಿವೃದ್ಧಿಯಾಗುತ್ತದೆ.

- ಕಂಚಿನ ಆಮೆ ಮತ್ತು ಮೀನು ಮನೆಯಲ್ಲಿ ಇಡೋದರಿಂದ ಮನೆಗೆ ಶುಭವಾಗುತ್ತದೆ. ಇದರಿಂದ ಮನೆಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳೂ ನಿವಾರಣೆಯಾಗುತ್ತದೆ.

- ಮನೆಯ ಉತ್ತರ ಭಾಗದಲ್ಲಿ ನೀರಿನಿಂದ ತುಂಬಿದ ಮಣ್ಣಿನ ಮಡಿಕೆ ಇಡಿ. ಇದರಿಂದ ಮನೆಯಲ್ಲಿ ಯಾವತ್ತೂ ಹಣದ ಕೊರತೆ ಉಂಟಾಗುವುದಿಲ್ಲ. ಆದರೆ ಯಾವತ್ತೂ ನೀರಿನ ಮಡಿಕೆ ಖಾಲಿಯಾಗದಂತೆ ನೋಡಿಕೊಳ್ಳಿ.

- ಮನೆಯಲ್ಲಿ ಒಂದು ಗ್ಲಾಸಿನಲ್ಲಿ ನೀರು ತುಂಬಿ ಅದರಲ್ಲಿ ಲಿಂಬೆ ಇಡಬೇಕು. ಇದನ್ನು ಪ್ರತಿ ಶನಿವಾರ ಬದಲಾಯಿಸಬೇಕು.

- ಪೂಜಾ ಕೊಠಡಿಯ ಪಕ್ಕ ಶೌಚಾಲಯ ಇರಲೇಬಾರದು. ಇದ್ದರೆ ಅದನ್ನು ಬಳಸಬಾರದು. ಆದರೆ ಶುಚಿಯಾಗಿಟ್ಟುಕೊಳ್ಳಬೇಕು.

- ವಿದ್ಯಾರ್ಥಿಗಳು ಯಾವಾಗಲೂ ಪೂರ್ವಕ್ಕೆ ಮುಖ ಮಾಡಿ ಕುಳಿತುಕೊಂಡು ಓದುವಂತೆ ವ್ಯವಸ್ಥೆ ಮಾಡಬೇಕು.

- ನೀವು ಶಂಖವನ್ನು ಮನೆಗೆ ತರಬೇಕೆಂದರೆ ಕನಿಷ್ಠ ಎರಡನ್ನು ತೆಗೆದುಕೊಂಡು ಬನ್ನಿ ಹಾಗೂ ಅವುಗಳನ್ನು ಪ್ರತ್ಯೇಕವಾಗಿ ಇರಿಸಬೇಕು.

- ಶಿವನಿಗೆ ಅಥವಾ ಸೂರ್ಯ ದೇವನಿಗೆ ಶಂಖದ ಮೂಲಕ ನೀರನ್ನು ಅರ್ಪಿಸಬಾರದು.

- ಊಟ ಮಾಡುವ ಸಮಯದಲ್ಲಿ ಕುಟುಂಬ ಸದಸ್ಯರೆಲ್ಲರೂ ನಿರಾಳವಾಗಿ, ಒತ್ತಡ ರಹಿತರಾಗಿ ಇರಬೇಕು.

- ಊಟ ಮಾಡುವಾಗ ದುಃಖ, ನೋವು, ಬೇಸರ, ನಿರಾಸೆ ತರುವ ವಿಷಯಗಳ ಕುರಿತು ಚರ್ಚೆ ಮಾಡಬಾರದು.

- ಊಟಕ್ಕೆ ಕುಳಿತುಕೊಳ್ಳುವಾಗ ಪಶ್ಚಿಮಕ್ಕೆ ಮುಖ ಮಾಡುವಂತಿರಲಿ.